ಇಂದು ದಿನಾಂಕಃ 10.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಎಸ್.ಆರ್.ಎ. ವಕೀಲರಿಂದಃ

1. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಮಾಹಿತಿ ನೀಡಿ ಬರೆಸಿರುತ್ತೇನೆ. ನನಗೆ ಸೇರಿದ ಆಸ್ತಿಯ ಸಂಖ್ಯೆ ನನಗೆ ನೆನಪಿಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ನನ್ನ ಹೆಸರಿನಲ್ಲಿ 2012 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯು ಮೊದಲಿಗೆ ನನ್ನ ಹೆಸರಿನಲ್ಲಿ ಇದ್ದು ನಂತರದಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಆಗಿದೆ. ಸರ್ಕಾರಿ ಸೌಲಭ್ಯಗಳನ್ನು ಪಡೆಯುವ ಉದ್ದೇಶದಿಂದ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಮಾಡಲಾಗಿದೆ.

2. ನನಗೆ ವಾದಿಯ ಪರಿಚಯ ಇರುವುದಿಲ್ಲ. ನಾನು ಚನ್ನಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ. ನನ್ನ ಮಡದಿ 2 ನೇ ಪ್ರತಿವಾದಿಯು ಹಿರೇಕೆರೂರಿನಲ್ಲಿ ವಾಸವಿದ್ದಾರೆ. ನನ್ನ ಮಕ್ಕಳು 2 ನೇ ಪ್ರತಿವಾದಿಯೊಂದಿಗೆ ವಾಸವಿದ್ದಾರೆ. ದಾವಾ ಆಸ್ತಿಯ ಪೂರ್ವಕ್ಕೆ ಬಸವರಾಜಪ್ಪ ಅವರಿಗೆ ಸೇರಿದ ಮನೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಗುಡ್ಡಳ್ಳಿ ಅವರಿಗೆ ಸೇರಿದ ಮನೆ ಹಾಗೂ ದಕ್ಷಿಣಕ್ಕ ರಸ್ತೆ ಇರುತ್ತದೆ. ದಾವಾ ಆಸ್ತಿಯ ಅಳತೆ ಪೂರ್ವ-ಪಶ್ಚಿಮ 9 ಮೀಟರ್ ಮತ್ತು ಉತ್ತರ-ದಕ್ಷಿಣ 7.5 ಮೀಟರ್‌ಗಳು ಇರುತ್ತದೆ.

3. ನಾನು ದಾವಾ ಆಸ್ತಿಯನ್ನು ವಾದಿಗೆ ದಿನಾಂಕಃ 28.02.2015 ರಂದು ಮಾರಾಟ ಮಾಡಲು ಒಪ್ಪಿ ಕ್ರಯದ ಕರಾರು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ ಈ ದಾವೆಯನ್ನು ಸಲ್ಲಿಸಿರುವ ವಿಚಾರ ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ಗೊತ್ತಾಗಿರುತ್ತದೆ. ವಾದಿ ಮತ್ತು ಅವರ ತಂದೆ ಎಲ್ಲಿ ವಾಸವಾಗಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ಅವರು ಯಾರು ಎಂದು ತಿಳಿದುಕೊಳ್ಳಲು ಪ್ರಯತ್ನಪಟ್ಟಿಲ್ಲ. ವಾದಿ ಮತ್ತು ಅವರ ತಂದೆ ನನಗೆ ಗೊತ್ತಿದ್ದರೂ ಸಹ ಹಾಗೂ ವಾದಿಯೊಂದಿಗೆ ಕ್ರಯದ ಕರಾರನ್ನು ಮಾಡಿಕೊಂಡಿರುವ ವಿಚಾರವು ತಿಳಿದಿದ್ದರೂ ಸಹ ಅವರು ಯಾರು ಎಂದು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನಗೆ ಹಣದ ಅವಶ್ಯಕತೆ ಇದ್ದಿದ್ದರಿಂದ ದಾವಾ ಆಸ್ತಿಯನ್ನು ವಾದಿಗೆ 3 ಲಕ್ಷ ರೂ.ಗಳಿಗೆ ಮಾರಾಟ ಮಾಡಲು ಒಪ್ಪಿ ಅವರ ಪರವಾಗಿ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿ ಕರಾರು ಪತ್ರವನ್ನು ವಾದಿಗೆ ಬರೆದುಕೊಡುವಾಗ ಒಟ್ಟು ಖರೀದಿ ಹಣದ ಪೈಕಿ ರೂ.1,50,000/- ಗಳನ್ನು ಸಾಕ್ಷಿಯ ಸಮಕ್ಷಮದಲ್ಲಿ ಮುಂಗಡ

ಹಣವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿ ಪತ್ರವನ್ನು ಬರೆಸಿಕೊಡುವ ಸಮಯದಲ್ಲಿ ಉಳಿದ ಕ್ರಯದ ಹಣವನ್ನು ಪಡೆದುಕೊಂಡು ದಾವಾ ಆಸ್ತಿಯ ಸ್ವಾಧೀನವನ್ನು ನೀಡುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

5. ದಿನಾಂಕಃ 28.02.2015 ರ ಕರಾರು ಪತ್ರವನ್ನು ನಾನೇ ಮುಂದೆ ನಿಂತು ಸತೀಶ ಬೊಂಗಾಳೆ ಎಂಬುವ ಪತ್ರ ಬರಹಗಾರರ ಹತ್ತಿರ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರಕ್ಕೆ ನಾನು ಕೂಡ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ವಾದಿ, ಅವರ ತಂದೆ ವೀರಭದ್ರಪ್ಪ ಬಸೂಂಡಿ ಮತ್ತು ಸಾಕ್ಷಿದಾರರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ತಪ್ಪಿಸಲು ನಾನು ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

6. ಪ್ರತಿವಾದ ಪತ್ರದಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ. ನಾನು ನನ್ನ ವಕೀಲರಿಗೆ ನೀಡಿರುವ ವಕಾಲತ್‌ನಲ್ಲಿರುವ ಸಹಿ ಕೂಡ ನನ್ನದೇ ಆಗಿರುತ್ತದೆ. ಕರಾರು ಪತ್ರದಲ್ಲಿರುವ ಸಹಿ ನನ್ನದಲ್ಲ. ನಿಪಿ-18 ರಲ್ಲಿ ವಾದಿ ಮತ್ತು ಆತನ ತಂದೆಯ ಸಹಿಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರ, ವಕಾಲತ್‌ನಲ್ಲಿ ಇರುವ ನನ್ನ ಸಹಿಗಳು ನಿಪಿ-18 ರಲ್ಲಿರುವ ಖರೀದಿ ಕರಾರು ಪತ್ರಕ್ಕೆ ಹೊಂದಾಣಿಕೆ ಆಗುತ್ತವೆ ಎಂದರೆ ಸರಿಯಲ್ಲ. ಸದರಿ 3 ದಾಖಲೆಗಳಲ್ಲಿರುವ 3 ಸಹಿಗಳು ನನಗೆ ಸೇರಿದ್ದವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದ ಪತ್ರ ಮತ್ತು ನನ್ನ ವಕೀಲರಿಗೆ ನೀಡಿದ ವಕಾಲತ್‌ನಲ್ಲಿರುವ ಸಹಿಯು ನನ್ನದೇ ಆಗಿದ್ದು, ಆದರೆ ನಿಪಿ-18 ರಲ್ಲಿರುವ ಖರೀದಿ ಕರಾರು ಪತ್ರದಲ್ಲಿರುವ ಸಹಿಯು ನನ್ನದಲ್ಲ ಎಂದು ನುಡಿಯುತ್ತಾರೆ

7. ನಾನು ಇಂದಿಗೂ ಸಹ ನಿಪಿ-18 ರಲ್ಲಿರುವ ಸಹಿಯ ರೀತಿಯೇ ಸಹಿ ಮಾಡುತ್ತೇನೆ ಎಂದರೆ ಸರಿಯಲ್ಲ. ವಾದಿಯು ನನ್ನ ಸಹಿಯನ್ನು ಖೊಟ್ಟಿ ರೀತಿಯಲ್ಲಿ ಸೃಷ್ಟಿಸಿಕೊಂಡಿರುತ್ತಾರೆ ಎಂದು ಆತನ ಮೇಲೆ ಯಾವುದೇ ಕಾನೂನು ಕ್ರಮವನ್ನು ಜರುಗಿಸಿರುವುದಿಲ್ಲ. ಬಡಜನರಿಗೆ ಮಾತ್ರ ಸರ್ಕಾರ ಮನೆಗಳನ್ನು ಹಂಚಿಕೆ ಮಾಡುತ್ತದೆ ಎಂದರೆ ಸರಿ. ನಾನು ವಾದಿಗೆ ನಿಪಿ-18 ರಂತೆ ಖರೀದಿ ಕರಾರು ಪತ್ರ ಬರೆದುಕೊಟ್ಟು ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ಒಟ್ಟು ಕ್ರಯದ ಹಣವಾದ ರೂ 3,00,000/-ಗಳ ಪೈಕಿ ರೂ. 1,50,000/- ಹಣವನ್ನು ಮುಂಗಡವಾಗಿ ಪಡೆದುಕೊಂಡಿದ್ದರೂ ಸಹ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ವಾದಿಯು ನಿಂತರವಾಗಿ ಬಾಕಿ ಹಣವನ್ನು ತಯಾರು ಮಾಡಿಕೊಂಡು ನನ್ನನ್ನು ಹಲವಾರು ಬಾರಿ ಕ್ರಯ ಪತ್ರವನ್ನು ಬರೆದುಕೊಡುವಂತೆ ಒತ್ತಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಗೆ ಕ್ರಯ ಪತ್ರವನ್ನು ಬರೆದು ಕೊಡಲು ಮುಂದೆ ಬರದಿರುವ ಕಾರಣದಿಂದ ವಾದಿಯು ತನ್ನ ವಕೀಲರ ಮುಖಾಂತರ ನಿಪಿ-5 ರಂತೆ ನೋಟೀಸನ್ನು

ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸಿಗೆ ನಾನು ಸುಳ್ಳು ಉತ್ತರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಬರೆದುಕೊಡುವ ತಪ್ಪಿಸುವ ಉದ್ದೇಶದಿಂದ ವಾದಿಯು ಮೊದಲು ಬಾರಿ ನೋಟೀಸನ್ನು ನನಗೆ ಕಳುಹಿಸಿದ ನಂತರದಲ್ಲಿ ದಾವಾ ಆಸ್ತಿಯನ್ನು ಉದ್ದೇಶ ಪೂರ್ವಕವಾಗಿ ನನ್ನ ಹೆಂಡತಿಯ ಹೆಸರಿಗೆ ಬದಲಾವಣೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ನಾನು ಆ ರೀತಿ ದಾವಾ ಆಸ್ತಿಯ ಖಾತೆಯನ್ನು ಬದಲಾವಣೆ ಮಾಡಿದ ನಂತರ ನನಗೆ ಮತ್ತೆ 2 ನೇ ಪ್ರತಿವಾದಿಗೆ ಮತ್ತೊಂದು ಬಾರಿ ನೋಟೀಸನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

9. ವಾದಿಗೆ ವಂಚನೆ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಇಂದಿಗೂ ಸಹ ಕ್ರಯದ ಕರಾರು ಪತ್ರದಲ್ಲಿರುವ ಷರತ್ತಯಗಳಂತೆ ನಡೆದುಕೊಳ್ಳಲು ಹಾಗೂ ಉಳಿಕೆ ಹಣವನ್ನು ನೀಡಿ ಕ್ರಯ ಪತ್ರವನ್ನು ಬರೆಸಿಕೊಳ್ಳಲು ಸದಾ ತಯಾರಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ-18ರ ಕ್ರಯದ ಕರಾರು ಪತ್ರದಲ್ಲಿರುವ ಷರತ್ತುಗಳನ್ನು ಉಲ್ಲಂಘಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.